ದಿನಾಂಕಃ 25-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

1. ಪ್ರ.ವ.ವ. ದೃಢಿಕೃತ ನಕಲು ನಿಪಿ-1
2. ದೂರಿನ ದೃಢಿಕೃತ ನಕಲು ನಿಪಿ-2
3. ಐ.ಎಂ.ವಿ.ಕಲಂನಲ್ಲಿಕೊಟ್ಟ ನೋಟಿಸಿನ ದೃಢಿಕೃತ ನಕಲು ನಿಪಿ-3
4. ಇನಕ್ವೆಸ್ಟ ಪಂಚನಾಮೆಯ ದೃಢಿಕೃತ ನಕಲು ನಿಪಿ-4
5. ನನ್ನ ಮಗ ತೇಜಸ ಈತನು ಪೊಲೀಸರಿಗೆ ಕೊಟ್ಟ ಹೇಳಿಕೆ ದೃಢಿಕೃತ ನಕಲು ನಿಪಿ-5
6. ನನ್ನ ಮಗನ ಸ್ನೇಹಿತ ಪೊಲೀಸರಿಗೆ ಕೊಟ್ಟ ಹೇಳಿಕೆಯ ದೃಡಿಕೃತ ನಕಲು ನಿಪಿ-6
7. ವಾಹನದ ಮಾಲಿಕ ಪೊಲೀಸರಿಗೆ ಕಲಂ 133 ನೋಟಿಸಿಗೆ ಕೊಟ್ಟ ಉತ್ತರದ ದೃಡಿಕೃತ ನಕಲು ನಿಪಿ-7
8. ಪಿಎಂ ವರದಿಯ ದೃಡಿಕೃತ ನಕಲು ನಿಪಿ-8
9. ವಾಹನ ಬಿಡುಗಡೆಯ ಪಂಚನಾಮೆಯ ದೃಡಿಕೃತ ನಕಲು ನಿಪಿ-9
10. ಐ.ಎಂ.ವಿ. ವರದಿಯ ದೃಢಿಕೃತ ನಕಲು ನಿಪಿ-10
11. ಇನ್ನೊಂದು ಐ.ಎಂ.ವಿ. ವರದಿಯ ದೃಢಿಕೃತ ನಕಲು ನಿಪಿ-11
12. ನನ್ನ ಮಗನ ಸ್ನೇಹಿತ ಸನತ ಈತನ ಗಾಯದ ಪ್ರಮಾಣ ಪತ್ರದ

ದೃಢಿಕೃತ ನಕಲು ನಿಪಿ-12

13. ನನ್ನ ಮಗನ ಸ್ನೇಹಿತ ಮಲ್ಲಿಕಾರ್ಜುನ ಈತನ ಗಾಯದ ಪ್ರಮಾಣ ಪತ್ರದ ದೃಢಿಕೃತ ನಕಲು ನಿಪಿ-13

14. ನನ್ನ ಮಗನ ಸ್ನೇಹಿತ ಸುಧಿಂದ್ರ ಈತನ ಗಾಯದ ಪ್ರಮಾಣ ಪತ್ರದ ದೃಢಿಕೃತ ನಕಲು ನಿಪಿ-14

15. ಐದು ಜನ ಸಾಕ್ಷಿದಾರರು ಕೊಟ್ಟ ಹೇಳಿಕೆಗಳು ದೃಢಿಕೃತ ನಕಲು ಒಟ್ಟಾರೆ ನಿಪಿ-15

16. ದೋಷಾರೋಪಣ ಪತ್ರದ ದೃಢಿಕೃತ ನಕಲು ನಿಪಿ-16

17. ನನ್ನ ಮಗನ ಕಂಪನಿಯವರು ಕೊಟ್ಟ 2020 ಫೆಬ್ರುವರಿ ತಿಂಗಳ ಪೇ ಸ್ಲಿಪ ನಿಪಿ-17

18. ನನ್ನ ಮಗನ ಕಂಪನಿಯವರು ಕೊಟ್ಟ 2020 ಏಪ್ರಿಲ ತಿಂಗಳ ಪೇ ಸ್ಲಿಪ ನಿಪಿ-18

ಕಾರಣ, ಅರ್ಜಿಯಲ್ಲಿ ಕೇಳಿದಂತೆ ಪರಿಹಾರಕ್ಕೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೆನೆ.

<u>ಪಾಟೀ ಸವಾಲುಃ ಎದುರುದಾರ ಪರ ಮಾನ್ಯ ವಕೀಲರಿಂದಃ</u>

ಎದುರುದಾರರ ಪರ ಮಾನ್ಯ ವಕೀಲರು ವೇಳೆ ಕೋರಿದ್ದು, ವೇಳೆ ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕಃ 07-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ 6 ನೇ ಎದುರುದಾರ ಪರ ಮಾನ್ಯ ವಕೀಲರಿಂದಃ</u>

ನಾನು ಡಿಪ್ಲೋ ಮಾಡಿ ವಿದ್ಯಾಭ್ಯಾಸ ಮಾಡಿದ್ದೆನೆ. ಈ ಅರ್ಜಿಯನ್ನು ಹಾಕಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೆನು. ನನಗೆ ಈ ಕೇಸಿನಲ್ಲಿ ಹಾಜರು ಮಾಡಿದ ದಾಖಲೆಗಳ ಮಾಹಿತಿ ಇದೆ. ನನ್ನ ಮಗನ ತಪ್ಪಿ ನಿಂದ ಅಪಘಾತವಾಗಿದೆ ಎಂದು ಪ್ರವವ ಯಲ್ಲಿ ನಮೂದು ಆಗಿದೆ ಎಂದರೆ ಸಾಕ್ಷಿಯು ಸುಳ್ಳಾಗಿ ನಮೂದು ಆಗಿದೆ ಎನ್ನುತ್ತಾರೆ. ನನ್ನ ಮಗ ಚಲಾಯಿಸುತ್ತಿದ್ದ ಮೋಟರ ಸೈಕಲ ನಂ.ಕೆಎ-06/ಎಚಎ-5049. ಪೊಲೀಸರು ಸಲ್ಲಿಸಿದ ದೋಷಾರೋಪಣಾ ಪತ್ರದಲ್ಲಿ 1 ಮತ್ತು 3 ನೇ ಎದುರುದಾರರ ವಾಹನ ನನಗೆ ಡಿಕ್ಕಿ ಮಾಡಿ ಅಪಘಾತವಾಗಿದೆ ಎಂದು ನಮೂದು ಮಾಡಿದ್ದಾರೆ ಎಂದರೆ ನಿಜ. ನಾವು ಈ ಕೇಸಿನಲ್ಲಿ ಎದುರುದಾರ ನಂ.5 ಮತ್ತು 6 ರವರ ಮೇಲೆ ಪರಿಹಾರದ ಹಣ ಕೇಳಿಲ್ಲ ಎಂದರೆ ನಿಜ. ಎದುರುದಾರ ನಂ. 1 ರಿಂದ 4 ರವರ ವಿರುದ್ಧ ಪರಿಹಾರದ ಹಣ ಕೊಡುವಂತೆ ಕೇಳಿದ್ದೆವೆ ಎಂದರೆ ನಿಜ.

ಪಾಟೀ ಸವಾಲುಃ ಉಳಿದ ಎದುರುದಾರ ಪರ ಮಾನ್ಯ ವಕೀಲರಿಂದಃ

2 ಮತ್ತು 4 ನೇ ಎದುರುದಾರರ ಪರ ಮಾನ್ಯ ವಕೀಲರು ವೇಳೆ ಕೋರಿದ್ದು, ವೇಳೆ ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕಃ 03-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

1) 2021-22 ನೇ ಸಾಲಿನ ಫಾರಂ ನಂ.16 ನಿಪಿ-19

2) ನನ್ನ ಐಡಿ ಕಾರ್ಡಿನ ಜೆರಾಕ್ಸ ಪ್ರತಿ ನಿಪಿ-20

(ಮೂಲ ಐಡಿ ಕಾರ್ಡ ತಾಳೆ ಮಾಡಿ ವಾಪಸ ನೀಡಲಾಗಿದೆ)

3) ಸರ್ವಿಸ ಸರ್ಟಿಫಿಕೇಟನ ಕಂಪ್ಯೂಟರ ಜನರೇಟೆಡ ಪ್ರತಿ ನಿಪಿ-21

ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರು ವೇಳೆ ಕೋರಿದ್ದು ವೇಳೆ ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕಃ 22-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1,3 ಮತ್ತು 5 ನೇ ಎದುರುದಾರರ ಪರ ವಕೀಲರಿಂದಃ

ಈ ಅಪಘಾತದಲ್ಲಿ ಮೃತ ಪಟ್ಟ ಸುಶಾಂತ ನನ್ನ ಮಗ. ಈ ಅಪಘಾತವಾದಾಗ ನಾನು ನನ್ನ ಊರಾದ ಬೇಟಗೇರಿಯಲ್ಲಿ ಇದ್ದೆನು.ನನಗೆ ಈ ಅಪಘಾತದ ಬಗ್ಗೆ ಬೆಳಗಿನ ಜಾವ ನನ್ನ ಮಗನ ಸ್ನೇಹಿತರು ಫೋನ ಮಾಡಿ ತಿಳಿಸಿದರು. ನನ್ನ ಮಗ ಮತ್ತು ಆತನ ಸ್ನೇಹಿತರು ಸೇರಿ ಒಟ್ಟು 9 ಜನ ಜೋಗಫಾಲ್ಸ ನೋಡಲೆಂದು ಬೆಂಗಳೂರಿನ ನೆಲಮಂಗಲದಿಂದ ಮೋಟರ ಸೈಕಲನಲ್ಲಿ ಹೋಗುವಾಗ ಈ ಅಪಘಾತ ಆಯಿತು. ಮೋಟರ ಸೈಕಲನ ಚಾಲಕರು ಎಲ್ಲರೂ ಹೆಲಮೆಟ ಧರಿಸಿದ್ದರು. ಈ ಅಪಘಾತ ದಿನಾಂಕ 15.08.2020 ರಂದು ಮುಂಜಾನೆ 05.20 ಗಂಟೆಗೆ ಆಯಿತು. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಈ ಅಪಘಾತ ಮುಂಜಾನೆ 05.45 ಗಂಟೆಗೆ ಆಗಿದೆ ಎಂದು ಹೇಳಿದ್ದೀರಿ ಎಂದರೆ ಸಾಕ್ಷಿಯು ಈ ಅಪಘಾತ 05.45 ಗಂಟೆಗೆ ಆಗಿದೆ ಎನ್ನುತ್ತಾರೆ. ಈ ಅಪಘಾತವು ದೇವಪೂರಹಟ್ಟಿಯಲ್ಲಿ ಚಿತ್ರದುರ್ಗ ಹೊಳಲಕೆರೆ ರಸ್ತೆಯಲ್ಲಿ ಆಯಿತು. ನನ್ನ ಮಗನು ಮೋಟರ ಸೈಕಲನ್ನು ಜಾಗರೂಕತೆಯಿಂದ ಚಲಾಯಿಸುತ್ತಿದ್ದನು. ನನ್ನ ಮಗ ಮೋಟರ ಸೈಕಲನ್ನು ರಸ್ತೆಯ ದಿಬ್ಬದ ಮೇಲೆ ವೇಗವಾಗಿ ಚಲಾಯಿಸಿಕೊಂಡು ಹೋಗಿದ್ದರಿಂದ ಮೋಟರ ಸೈಕಲ ತಾನಾಗಿ ಬಿದ್ದು ನಂತರ ಒಂದರಮೆಲೊಂದು ಮೋಟರ ಸೈಕಲ ಬಿದ್ದು ಅಪಘಾತ ಆಯಿತು ಎಂದರೆ ಸರಿಯಲ್ಲ. ಸುಧಿಂದ್ರ ಕುಲಕರ್ಣಿ ಇವರು ಪೊಲೀಸರಿಗೆ ಸುಳ್ಳು ದೂರನ್ನು ಕೊಟ್ಟಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಎದುರುದಾರ ನಂ.1 ಮತ್ತು 5 ರವರ ವಿರುದ್ಧ ದೋಷಾರೋಪಣಾ

ಪತ್ರ ಸಲ್ಲಿಸಿರುತ್ತಾರೆ. ಎದುರುದಾರ ನಂ.1 ಮತ್ತು 5 ರವರನ್ನು ಈ ಅಪಘಾತಕ್ಕೆ ಸಂಬಂಧ ಪಟ್ಟಂತೆ ಕ್ರಿಮಿನಲ್ ಕೇಸಿನಲ್ಲಿ ನ್ಯಾಯಾಲಯವು ದೋಷ ಮುಕ್ತ ಗೊಳಿಸಿ ಬಿಡುಗಡೆ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನಿಮ್ಮ ಮಗನಿಗೆ ಒಂದು ಕೋಟಿಯ ಪ್ಯಾಕೇಜ ಕೆಲಸ ಸಿಗುತ್ತದೆ ಎಂದು ಹೇಳಲು ದಾಖಲೆಗಳನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಆ ದಾಖಲೆ ಹಾಜರು ಮಾಡಿಲ್ಲ ಎನ್ನುತ್ತಾರೆ. ನನ್ನ ಮಗನಿಗೆ ಕಂಪನಿಯಲ್ಲಿ ತಿಂಗಳಿಗೆ ರೂ.59,590/- ಸಂಬಳ ಇತ್ತು. ಆತನ ಸಂಬಳದಲ್ಲಿ ಕಡಿತ ಮಾಡಿ ಎಷ್ಟು ಸಂಬಳ ಸಿಗುತ್ತಿತ್ತು ಎಂದರೆ ಸಾಕ್ಷಿಯು ರೂ.40,000/- ಚಿಲ್ಲರೆ ಹಣ ಸಂಬಳ ಸಿಗುತ್ತಿತ್ತು ಎನ್ನುತ್ತಾರೆ. ನನ್ನ ಮಗನೇ ಮೋಟರ ಸೈಕಲನಲ್ಲಿ ವೇಗವಾಗಿ ಹೋಗುವಾಗಆತನೇ ಸ್ಕೀಡ ಆಗಿ ಬಿದ್ದು ಮೃತ ಪಟ್ಟಿದ್ದರು ಸಹ ಹೆಚ್ಚಿ ನ ಪರಿಹಾರದ ಹಣವನ್ನು ಪಡೆಯುವ ಉದ್ದೇಶದಿಂದ ನಾವು ಸುಳ್ಳು ಕ್ರಿಮಿನಲ್ ಕೇಸನ್ನು ಹಾಕಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**4** ನೇ ಎದುರುದಾರರ ಪರ ವಕೀಲರು ವೇಳೆ ಕೋರಿದ್ದು, ವೇಳೆ ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.